◆ 'ಕಾಂತಾರ 1' ಸಿನಿಮಾ ಅನುಭವ ಹೇಗಿತ್ತು?

'ಕಾಂತಾರ 1' ಸಿನಿಮಾದಲ್ಲಿ ನನ್ನದು ಕುಲಶೇಖರನ ಪತ್ನಿಯ ಪುಟ್ಟ ಪಾತ್ರ. ಈ ಸಿನಿಮಾಗೆ 2023ರಲ್ಲಿ ಆಡಿಷನ್ ನೀಡಿ ಆಯ್ಕೆಯಾಗಿದ್ದೆ. ಈ ಸಿನಿಮಾದ ಭಾಗವಾಗಬೇಕು ಎಂದು ಬಯಸಿದ್ದೆ. 'ಲಾರ್ಜರ್ ದೆನ್ ಲೈಫ್' ಅನುಭವಗಳು ಈ ಸಿನಿಮಾದಿಂದ ದಕ್ಕಿದವು. ದೊಡ್ಡ ದೊಡ್ಡ ಕಲಾವಿದರಿದ್ದರು. ರಿಷಬ್ ಅವರ ನಿರ್ದೇಶನದ ಸಿನಿಮಾ ಎಂಬುದು ನನ್ನಲ್ಲಿ ಉತ್ಸಾಹ ತುಂಬಿತ್ತು. ಒಟ್ಟಾರೆ ಅತ್ಯುತ್ತಮ ಅನುಭವವಾಯಿತು.

ಕನ್ನಡದಲ್ಲಿ ಈಗಾಗಲೇ ಮೂರು ಸಿನಿಮಾಗಳಲ್ಲಿ ನಟಿಸಿದ್ದೆ. 'ಕಾಂತಾರ 1' ಆದ ಮೇಲೆ ಜನ ನನ್ನನ್ನು ಗುರುತಿಸಲು ಆರಂಭಿಸಿದರು. ಒಳ್ಳೆಯ ಎಕ್ಸ್‌ಪೋಷರ್ ಸಿಕ್ಕಿತು.

◆ ಎಂಜಿನಿಯರಿಂಗ್ ಓದಿದ ಹುಡುಗಿಗೆ ಸಿನಿಮಾ ನಂಟು ಬೆಸೆದುಕೊಂಡಿದ್ದು ಹೇಗೆ?

ನಾನು ಮೂಲತಃ ಭಟ್ಕಳದವಳು. ನನ್ನ ತಂದೆಗೆ ಸಿನಿಮಾ ಥಿಯೇಟರ್‌ನಲ್ಲಿ ಫುಡ್‌ಸ್ಟಾಲ್, ಕ್ಯಾಂಟೀನ್‌ನಲ್ಲಿ ಬಿಸಿನೆಸ್ ಇದ್ದದ್ದು. ನಾನು ಬೆಳೆದಿದ್ದೇ ಥಿಯೇಟರ್ ವಾತಾವರಣವಾದ್ದರಿಂದ ಸಿನಿಮಾ ಎಂಬುದು ನನ್ನ ಬದುಕಿಗೆ ಬಹಳ ಹತ್ತಿರವಾಗಿತ್ತು. ಚಿಕ್ಕವಳಿದ್ದಾಗಿಂದಲೂ ಥಿಯೇಟರ್ ಪ್ರೊಜೆಕ್ಟರ್ ರೂಮ್‌ನಲ್ಲಿ, ಬಾಲ್ಕನಿ ಹೀಗೆ ಎಲ್ಲ ಕಡೆ ಕುಳಿತು ಸಿನಿಮಾ ನೋಡಿದ್ದೇನೆ. ತುಂಬಾ ಸಿನಿಮಾಗಳನ್ನು ನೋಡುತ್ತಾ ಬೆಳೆದಿದ್ದರಿಂದ ಸಿನಿಮಾ ನನ್ನ ಮನಸ್ಸಿನಲ್ಲಿ ಉಳಿದುಕೊಂಡುಬಿಟ್ಟಿತ್ತು. ಎಂಜಿನಿಯರಿಂಗ್ ಓದಿ ಕೆಲಸಕ್ಕೆ ಹೋಗಬೇಕು ಎಂದುಕೊಂಡಾಗಲೂ, ಎಲ್ಲೇ ಹೋದರೂ ಸಿನಿಮಾಗೆ ಸಂಬಂಧಿಸಿದ್ದ ವಿಷಯಗಳೇ ನಡೆಯುತ್ತಿದ್ದವು. 'ನೀನು ಯಾಕೆ ಸಿನಿಮಾದಲ್ಲಿ ನಟಿಸಬಾರದು' ಎಂಬ ಪ್ರಶ್ನೆಗಳೇ ಕೇಳಿಬರುತ್ತಿದ್ದವು. ಬಹುಶಃ ಚಿಕ್ಕವಯಸ್ಸಿನಿಂದಲೇ ಸಿನಿಮಾ ಅನ್ನುವುದು ಗೊತ್ತೋ ಗೊತ್ತಿಲ್ಲದೆಯೋ ನನ್ನ ಒಳಗೆ ಇತ್ತು ಅನ್ನಿಸುತ್ತದೆ.

◆ ಸೌಂದರ್ಯ ಸ್ಪರ್ಧೆಗಳು, ಜಾಹೀರಾತುಗಳಲ್ಲಿ ತೊಡಗಿಸಿಕೊಂಡ ಅನುಭವ?

2016ರಿಂದ 18ರಲ್ಲಿ ಕಾಲೇಜಿಗೆ ಹೋಗುತ್ತಲೇ ಹಲವು ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿದೆ. 2016ರಲ್ಲಿ 'ಬೆಂಗಳೂರು ಟಾಪ್ ಮಾಡೆಲ್ ಹಂಟ್' ಸ್ಪರ್ಧೆಯಲ್ಲಿ ಭಾಗವಹಿಸಿದ್ದೆ. 2018ರಲ್ಲಿ 'ಮಿಸ್ ಯೂನಿವರ್ಸ್ ಇಂಡಿಯಾ' ಸ್ಪರ್ಧೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದೆ. ಈ ಸ್ಪರ್ಧೆಗಳು ನನ್ನಲ್ಲಿ ಆತ್ಮವಿಶ್ವಾಸ ತುಂಬಿದ್ದವು. 'ಸ್ಟೇಜ್ ಪ್ರೆಸೆನ್ಸ್', 'ಸ್ಕ್ರೀನ್ ಪ್ರೆಸೆನ್ಸ್' ಕೌಶಲಗಳನ್ನು ಕಲಿಸಿಕೊಟ್ಟವು. ಸುಮಾರು 150 ಜಾಹೀರಾತುಗಳಲ್ಲಿ ಅಭಿನಯಿಸಿದೆ. ಇವೆಲ್ಲವೂ ಕ್ಯಾಮೆರಾ ಮುಂದೆ ಬರುವುದನ್ನು ಸರಳ ಮಾಡಿದವು. ನನ್ನ ಖುಷಿ ಇದರಲ್ಲಿದೆ ಎಂದು ಬಹಳ ಅನ್ನಿಸಿತ್ತು. ಕೋವಿಡ್ ಮುಗಿದ ತಕ್ಷಣ ಸಿನಿಮಾಗಳೆಡೆಗೆ ಹೊರಳಿದೆ.

◆ ಸಿನಿಮಾರಂಗದಲ್ಲಿ ಅವಕಾಶಗಳು ತೆರೆದುಕೊಂಡಿದ್ದು ಹೇಗೆ?

ಕನ್ನಡದಲ್ಲಿ ಮೊದಲು ಅವಕಾಶಗಳು ಸಿಕ್ಕಿರಲಿಲ್ಲ. ಹಾಗಾಗಿ ತಮಿಳಿನಲ್ಲಿ ಪ್ರಯತ್ನ ಮಾಡಿದೆ. ಅಲ್ಲಿ ಮೂರು ಸಿನಿಮಾಗಳಲ್ಲಿ ನಟಿಸಿದೆ. 'ರೆಬೆಲ್', 'ನಿರಂ ಮಾರುಂ ಉಳಗಿಲ್', 'ಫೋರ್ ವಿಂಡೋಸ್' ಸಿನಿಮಾಗಳಲ್ಲಿ ಅಭಿನಯಿಸಿದೆ. ತಮಿಳಿನಲ್ಲಿ ನಾನು ನಟಿಸಿದ್ದ 'ರಂಗಮ್ಮ' ಎಂಬ ಹಾಡು ವೈರಲ್ ಆಯಿತು. ಅದಾದ ಮೇಲೆ ಅಲ್ಲಿ ಅವಕಾಶಗಳು ಬರಲು ಆರಂಭಿಸಿದವು. ಕನ್ನಡದಲ್ಲಿ 'ನನ್ನ ಪ್ರಕಾರ' ಎಂಬ ಸಿನಿಮಾದಲ್ಲಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡಿದ್ದೆ. ಕಾಲೇಜಿನಲ್ಲಿದ್ದಾಗಲೇ ಆ ಪಾತ್ರ ಮಾಡಿದ್ದೆ. 'ಧರಣಿ ಮಂಡಲ ಮಧ್ಯದೊಳಗೆ' ಹಾಗೂ 'ನೋಡಿದವರು ಏನಂತಾರೆ' ಸಿನಿಮಾಗಳಲ್ಲಿ ನವೀನ್ ಶಂಕರ್ ಅವರ ಜೊತೆ ಅಭಿನಯಿಸಿದೆ. ನಂತರ ಸಿಕ್ಕಿದ್ದು 'ಕಾಂತಾರ 1'. ಈ ಸಿನಿಮಾ ನಂತರ ಕನ್ನಡದಲ್ಲಿಯೂ ನನ್ನನ್ನು ಗುರುತಿಸುತ್ತಿದ್ದಾರೆ.

◆ ಕನ್ನಡ ಸಿನಿಮಾರಂಗದಲ್ಲಿ ನಿಮ್ಮ ಕನಸುಗಳು?

ಹೆಚ್ಚಿನ ಸಿನಿಮಾಗಳಲ್ಲಿ, ಅದೂ ಉತ್ತಮ ಕಥೆಗಳ ಕಮರ್ಷಿಯಲ್ ಸಿನಿಮಾಗಳಲ್ಲಿ ನಟಿಸಬೇಕು ಎಂಬಾಸೆಯಿದೆ. ಒಳ್ಳೆಯ ಲವ್ ಸ್ಟೋರಿ, ಫ್ಯಾಮಿಲಿ ಡ್ರಾಮಾ, ಕಾಮಿಡಿ ಡ್ರಾಮಾ ಹೀಗೆ ಭಿನ್ನ ಜಾನರ್‌ಗಳಲ್ಲಿ ಸುಂದರ ಕಮರ್ಷಿಯಲ್ ಸಿನಿಮಾಗಳಲ್ಲಿ ನಟಿಸಬೇಕು ಎಂಬ ಅಭಿಲಾಷೆಯಿದೆ. ಈಗ ಸಹಿ ಹಾಕುತ್ತಿರುವ ಸಿನಿಮಾಗಳು ಅದೇ ಲೈನ್‌ನಲ್ಲಿವೆ.

◆ ಪಾತ್ರಗಳ ಕುರಿತು ನಿಮ್ಮ ಅಪೇಕ್ಷೆ?

ಪ್ರಬಲವಾಗಿರುವ, ಸ್ಕ್ರೀನ್ ಪ್ರೆಸೆನ್ಸ್ ಇರುವ, ನಟನೆಗೆ ಆದ್ಯತೆ ಇರುವ ಪಾತ್ರಗಳನ್ನು ಅಪೇಕ್ಷಿಸುತ್ತೇನೆ. ಹತ್ತು ವರ್ಷಗಳ ನಂತರ ನನ್ನ ಫಿಲ್ಮೋಗ್ರಫಿಯನ್ನು ತಿರುಗಿ ನೋಡಿದಾಗ ಅತ್ಯುತ್ತಮ ಪಾತ್ರಗಳ ಆಯ್ಕೆ ಕುರಿತು ನನ್ನಲ್ಲಿ ತೃಪ್ತಿ ಇರಬೇಕು. ಸಿನಿಮಾರಂಗಕ್ಕೆ ಬಂದ ಆರಂಭದಲ್ಲಿಯೇ ಅಂಥ ಅವಕಾಶಗಳು ಸಿಗಬೇಕು. ನಿರ್ದೇಶಕರು ನಟಿಯರಿಗೆಂದೇ ಪಾತ್ರ ಬರೆಯಬೇಕು. ಅಂಥ ಕಲಾವಿದೆಯಾಗಲು ಬಯಸುತ್ತೇನೆ.

◆ ನಟನೆ ಹೊರತಾಗಿ ನಿಮ್ಮ ಹವ್ಯಾಸಗಳು?

ವಾಲಿಬಾಲ್, ಕಬಡ್ಡಿ, ಕ್ರಿಕೆಟ್ ಆಡುವುದೆಂದರೆ ಇಷ್ಟ. ಅಡುಗೆ ಮಾಡುವುದನ್ನೂ ಬಹಳ ಇಷ್ಟಪಡುತ್ತೇನೆ. ಅಡುಗೆ ಪ್ರಕ್ರಿಯೆಯೇ ನನಗೆ ಒಂದು ಥೆರಪಿ ರೀತಿ ಅನ್ನಿಸುತ್ತದೆ.

◆ ಸದ್ಯ ನೀವು ತೊಡಗಿಕೊಂಡಿರುವ ಸಿನಿಮಾಗಳು?

ತಮಿಳಿನಲ್ಲಿ 'ಫೋರ್ ವಿಂಡೋಸ್' ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ಮತ್ತೊಂದು ಸಿನಿಮಾದಲ್ಲಿಯೂ ತೊಡಗಿಕೊಂಡಿದ್ದೇನೆ. ಕನ್ನಡದಲ್ಲಿ ಎರಡು ಸಿನಿಮಾಗಳಿಗೆ ಸಹಿ ಮಾಡಿದ್ದೇನೆ. ■

# ವರ್ಷಾಂತ್ಯದಲ್ಲಿ 'ಮಾರ್ಕ್'

**ಕಿಚ್ಚ ಸುದೀಪ್** ಹಾಗೂ ವಿಜಯ್ ಕಾರ್ತಿಕೇಯ ಯಶಸ್ವಿ ಸಂಯೋಜನೆಯ ಎರಡನೇ ಸಿನಿಮಾ 'ಮಾರ್ಕ್' ಚಿತ್ರೀಕರಣ ಮುಕ್ತಾಯವಾಗಿದ್ದು, ಇದೇ ಡಿಸೆಂಬರ್ 25ಕ್ಕೆ ಬಿಡುಗಡೆಯಾಗುತ್ತಿದೆ.

ಈ ಕುರಿತು ನಟ ಸುದೀಪ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದು, ಸಿನಿಮಾ ಬಿಡುಗಡೆ ಬಗ್ಗೆ ಸಂತಸ ಹಂಚಿಕೊಂಡಿದ್ದಾರೆ. ಸಿನಿಮಾ ರೂಪುಗೊಂಡಿದ್ದರ ಹಿಂದಿನ ಶ್ರಮವನ್ನು ಮೆಲುಕು ಹಾಕಿದ್ದಾರೆ.

'ನಮ್ಮ ಚಿತ್ರತಂಡದ ಉದ್ದೇಶ ಒಂದೇ ಆಗಿತ್ತು. ಮೊದಲು ಏನು ಅಸಾಧ್ಯ ಎಂದುಕೊಂಡಿದ್ದೆವೊ ಅದನ್ನು ಸಾಧಿಸುವುದು. ಇದು ಕೆಲವರಿಂದ ಆದದ್ದಲ್ಲ, ತಂಡದ ಪ್ರತಿ ವ್ಯಕ್ತಿಯ ಶ್ರಮವೂ ಇದರಲ್ಲಿ ಅಡಗಿದೆ. ತಂಡದ ಪ್ರತಿ ವ್ಯಕ್ತಿಯೂ ಒಂದೇ ಗುರಿಯೊಂದಿಗೆ ಸೆಟ್‌ಗೆ ಬರುತ್ತಿದ್ದೆವು' ಎಂದು ಹೇಳಿದ್ದಾರೆ.

''ಮ್ಯಾಕ್ಸ್' ರೀತಿಯಲ್ಲಿಯೇ ಈ ಬಾರಿ ಕೂಡ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಸುದೀಪ್ ಕಾಣಿಸಿಕೊಳ್ಳುತ್ತಿದ್ದಾರೆ. ಮಾಸ್, ಆ್ಯಕ್ಷನ್ ಕಥೆ ಹೊಂದಿರುವ ಚಿತ್ರ. ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಡಿಸೆಂಬರ್ 25ರಂದು ಸಿನಿಮಾ ತೆರೆಗೆ ಬರಲಿದೆ. ವರ್ಷಾಂತ್ಯಕ್ಕೆ ಒಳ್ಳೆಯ ಸಿನಿಮಾ ನೀಡಲಿದ್ದೇವೆ'' ಎಂದು ಚಿತ್ರತಂಡ ಹೇಳಿಕೊಂಡಿದೆ. ಚಿತ್ರಕ್ಕೆ ಶೇಖರ್ ಚಂದ್ರ ಅವರ ಛಾಯಾಚಿತ್ರಗ್ರಹಣ, ಅಜನೀಶ್ ಬಿ. ಲೋಕನಾಥ್ ಸಂಗೀತವಿದೆ. ಸಿನಿಮಾದಲ್ಲಿ ಅಜಯ್ ಮಾರ್ಕಂಡೆ ಎಂಬ ಪಾತ್ರವನ್ನು ಸುದೀಪ್ ನಿರ್ವಹಿಸಿದ್ದಾರೆ. ■

